**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 10-06-2024.**

**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** ಆಂಜಿನಪ್ಪ ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಆಂಜಿನಪ್ಪ ಅವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು ವಿಭಾಗ ಕೋರಿ ದಾಖಲಿಸಿದ್ದು ನಮ್ಮ ಕ್ರಯಪತ್ರವನ್ನು ಅವರು ಪ್ರಶ್ನಿಸಿರುತ್ತಾರೆ. ವಾದಿಗೂ ಮತ್ತು ಆಂಜಿನಪ್ಪ ಹಾಗೂ ದಾವಾಸ್ವತ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ನಾನು ತೆಗೆದುಕೊಂಡ ನಿಲುವಿಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮೂಲ ದಾಖಲೆಗಳನ್ನು ಖುದ್ದಾಗಿ ಪರಿಶೀಲನೆ ಮಾಡಿರುತ್ತೇನೆ. ಸದರಿ ದಾಖಲೆಗಳು 2009 ರಿಂದ ಬ್ಯಾಂಕ್ ನಲ್ಲಿ ಇದ್ದು, ನಾನು 2007-08 ರಲ್ಲಿ ಸದರಿ ದಾಖಲೆಗಳನ್ನು ನೋಡಿರುತ್ತೇನೆ. ನಾನು 2010 ರಲ್ಲಿ 13 ನೇ ಪ್ರತಿವಾದಿಯ ಕಂಪನಿಯನ್ನು ಸೇರಿಕೊಂಡಿರುತ್ತೇನೆ. ಪ್ರಾಮಾಣಿಕ ಖರೀದಿದಾರ ಯಾವುದೇ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಏನೆಲ್ಲಾ ಕ್ರಮ ಕೈಗೊಳ್ಳಬೇಕು ಹಾಗೂ ಎಚ್ಚರಿಕೆ ವಹಿಸಬೇಕು ಎಂದು ನನಗೆ ಗೊತ್ತು. 10 ರಿಂದ 13 ನೇ ಪ್ರತಿವಾದಿಗಳು ದಾವಾಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ವಕೀಲರಿಂದ ಕಾನೂನು ಅಭಿಪ್ರಾಯ ಪಡೆದುಕೊಂಡಿರುತ್ತೇವೆ. ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ದಾವೆ ದಾಖಲಿಸಿದ ನಂತರ ವಾದಿ, ಆಂಜಿನಪ್ಪ ಮತ್ತು ದಾವಾಸ್ವತ್ತಿಗೆ ಏನು ಸಂಬಂಧ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ನಾನು ವಾದಿಯ ನಿಲುವು ಏನು ಎಂದು ತಿಳದುಕೊಳ್ಳದೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಇ. ವೆಂಕಟಶಾಮಪ್ಪ ಅವರ ಸ್ವತ್ತುಗಳಲ್ಲಿ ಯಾವುದೇ ವಿಭಾಗವನ್ನು ಕೇಳಿರುವುದಿಲ್ಲ. ನಿ.ಡಿ.1 ನ್ನು ದಾವಾ ಸರ್ವೆ ಸಂಖ್ಯೆಯ ಇನ್ನೊಂದು ಭಾಗದ ಬಗ್ಗೆ

ಹಾಜರುಪಡಿಸಿರುತ್ತೇನೆ. ವಾದಿ ಸರ್ವೆ ಸಂಖ್ಯೆ 91-4 ರಲ್ಲಿ 1 ಎಕರೆ ಒಂದೂವರೆ ಗುಂಟೆ ಜಮೀನಿನ ಬಗ್ಗೆ ಹಕ್ಕು ಇದೆ ಎಂದು ಹೇಳುತ್ತಿದ್ದಾರೆ. ಸದರಿ ಸ್ವತ್ತು ಇ. ವೆಂಕಟಶಾಮಪ್ಪ ಅವರ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ, ದಕ್ಷಿಣ ದಿಕ್ಕಿನಲ್ಲಿ ಇದೆ ಎಂದು ನುಡಿಯುತ್ತೇನೆ. ದಾವಾ ಐಟಂಸಂಖ್ಯೆ 4 ನ್ನು ನಾವು 12 ನೇ ಪ್ರತಿವಾದಿಯಿಂದ ಖರೀದಿಸಿರುತ್ತೇವೆ. ನಾವು ಯಾವುದೇ ಸ್ವತ್ತಿನ ಸ್ವಾಧೀನವನ್ನು ವಾದಿಯ ಕಡೆಯಿಂದ ಪಡೆದುಕೊಂಡಿರುವುದಿಲ್ಲ. ವಾದಿ ನಮ್ಮ ಪರವಾಗಿ ಅಥವಾ 10 ರಿಂದ 12 ನೇ ಪ್ರತಿವಾದಿಗಳ ಪರವಾಗಿ ಹಕ್ಕು ಬಿಡುಗಡೆ ಮಾಡಿಕೊಟ್ಟಿರುವುದಿಲ್ಲ. ವಾದಿ ಈಗಲೂ ಸಹ ಎಲ್ಲಾ ದಾವಾಸ್ವತ್ತುಗಳ ಜಂಟಿ ಸ್ವಾಧೀನದಲ್ಲಿ ಇದ್ದು, ನಾವು ಅವರಿಂದ ಯಾವುದೇ ಹಕ್ಕು ಅಥವಾ ಸ್ವಾಧೀನವನ್ನು ಪಡೆದುಕೊಂಡಿರುವುದಿಲ್ಲ. ನಿ.ಡಿ.2 ರಲ್ಲಿ ಚನ್ನಮ್ಮ ಎಂದರೆ ಆಂಜಿನಪ್ಪ ಅವರ ಮಗಳು. ನಿ.ಡಿ.2 ರ ಪ್ರಕಾರ ಚನ್ನಮ್ಮ ಅವರಿಗೆ ಸದರಿ ಸ್ವತ್ತುಗಳಲ್ಲಿ ಹಕ್ಕು ಇತ್ತು. ನಿ.ಡಿ.2 ರಲ್ಲಿ ವಾದಿಯ ಹೆಸರು ಏಕೆ ನಮೂದು ಆಗಿರುವುದಿಲ್ಲ ಎಂದು ನಾನು ಇತರೆ ಪ್ರತಿವಾಗಳಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. 10 ರಿಂದ 12 ನೇ ಪ್ರತಿವಾದಿಗಳು ವಾದಿಗೆ ದಾವಾಸ್ವತ್ತುಗಳಲ್ಲಿ ಹಕ್ಕು ಇದೆ ಎಂದು ಗೊತ್ತಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. 13 ನೇ ಪ್ರತಿವಾದಿ ಸಹ ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ವಾದಿಯ ಹಕ್ಕನ್ನು ಲಪಟಾಯಿಸುವ ಉದ್ದೇಶದಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ವಾದಿಯ ಹಕ್ಕಿಗೆ ಸಂಬಂಧಿಸಿದಂತೆ ನಮ್ಮ ಹೆಸರಿಗೆ ಸದರಿ ಸ್ವತ್ತು ಬದಲಾವಣೆ ಆಗಿರುವುದಿಲ್ಲ ಹಾಗೂ ನಮಗೆ ಹಕ್ಕು ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಈಗ ನೀಡಿದ ಹೇಳಿಕೆ 13 ನೇ ಪ್ರತಿವಾದಿ ಕಂಪನಿಗೆ ಅನ್ವಯ ಆಗುತ್ತದೆ. 10 ರಿಂದ 12 ನೇ ಪ್ರತಿವಾದಿಗಳು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಏನು ಹಕ್ಕು ಚಲಾಯಿಸಿದ್ದಾರೆ ಹಾಗೂ ಏನೆಲ್ಲಾ ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕರ 10 ರಿಂದ 12 ನೇ ಪ್ರತಿವಾದಿಗಳ ಯಾವುದೇ ದಾಖಲೆಗೂ ಸಹ ವಾದಿ ಸಹಿ ಮಾಡಿರುವುದಿಲ್ಲ. 10 ರಿಂದ 12 ನೇ ಪ್ರತಿವಾದಿಗಳು

ದಾವಾಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಮುನ್ನೆಚ್ಚರಿಕೆ ವಹಿಸಿದ್ದರು. 10 ರಿಂದ 12 ನೇ ಪ್ರತಿವಾದಿಗಳು ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ನೀಡಿರುವುದಿಲ್ಲ. ದಾವಾಸ್ವತ್ತುಗಳ ಬಗ್ಗೆ ಎಷ್ಟು ವ್ಯಾಲ್ಯೂ ಮಾಡಿದ್ದಾರೆ ಮತ್ತು ಎಷ್ಟು ನ್ಯಾಯಾಲಯದ ಶುಲ್ಕವನ್ನು ಪಾವತಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಸಹೋದರ ಸಹೋದರಿಯರು ಈ ದಾವೆಯಲ್ಲಿ ಏನು ನಿಲುವು ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯಲ್ಲಿ ಯಾವ ಸತ್ಯಾಂಶಗಳನ್ನು ಮುಚ್ಚಿಟ್ಟಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. 13 ನೇ ಪ್ರತಿವಾದಿ ದಾವಾಸ್ವತ್ತಿನ ಸ್ವಾ ಧೀನವನ್ನು ಹೊಂದಿರುವುದಿಲ್ಲ ಹಾಗೂ ಈವತ್ತಿಗೂ ಸಹ ದಾವಾಸ್ವತ್ತು ವಾದಿಯ ಸ್ವಾಧೀನದಲ್ಲಿ ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಸಹೋದರ ಸಹೋದರಿಯರು ವಾದಿಗೆ ಮೋಸ ಮಾಡಿ ನಿ.ಡಿ.2 ನ್ನು ಮಾಡಿಕೊಂಡಿರುವುದರಿಂದ ಅವರಿಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**